ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 700 (1071)

ಶ್ರೀ ಸಿ.ಆರ್.ಸಗೀರ್ ಅಹಮ್ಮದ್ (ಚಿಕ್ಕಮಗಳೂರು):- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ತಾಲ್ಲೂಕಿನ ಮಳಲೂರು ಗ್ರಾಮದಲ್ಲಿ ಮಳಲೂರು ಏತ ನೀರವಾರಿ ಯೋಜನೆಯ ಪ್ರಸ್ತಾವನೆ ಸರ್ಕಾರದವರ ಮುಂದಿದೆಯೇ?

ಆ) ಈ ಯೋಜನೆಯ ಸಮೀಕ್ಷೆ ಎಷ್ಟು ವರ್ಷದ ಹಿಂದೆ ಪ್ರಾರಂಭವಾಯಿತು ಹಾಗೂ ಈ ಯೋಜನೆಗಾಗಿ ಸರ್ಕಾರವು ಮಂಜೂರಾತಿ ನೀಡಿದೆಯೇ?

ಇ) ಹಾಗಿದ್ದಲ್ಲಿ ಇದರ ಕೆಲಸ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-

ಅ) ಹೌದು.

ಆ) 3 ವರ್ಷದ ಹಿಂದೆ ಅಂದರೆ 93-94ರಲ್ಲಿ ಪ್ರಾರಂಭವಾಯಿತು. ಈ ಯೋಜನೆಗೆ ಇನ್ನೂ ಮಂಜೂರಾತಿ ನೀಡಿಲ್ಲ.

ಇ) ಅಂದಾಜಿಗೆ ಮಂಜೂರಾತಿಯನ್ನು ನೀಡಿದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ವಿಷಯ:- ಕೊಪ್ಪಳ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಗಳಗಾಗಿ ಖರ್ಚಾದ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 714 (1210)

ಶ್ರೀ ಸಂಗಣ್ಣ ಕರಡಿ (ಕೊಪ್ಪಳ):- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನ ಆಯವ್ಯಯದಲ್ಲಿ ಕೊಪ್ಪಳ ತಾಲ್ಲೂಕಿನ ಚಿಕ್ಕಬದನಾಳ ನೀರಲಗಿ, ಹರವಾಗಲಗಿ, ನೆಲವಗಿಪುರ, ಆಳವಾಡಿ ಬಿಸರಳ್ಳಿ ಹಾಗೂ ಡಂಬರಹಳ್ಳಿ ಗ್ರಾಮಗಳಿಗೆ ಏತ ನೀರಾವರಿ ಯೋಜನೆಗಳಿಗಾಗಿ ಮಂಜೂರು ಮಾಡಲಾಗಿರುವ ಹಣವೆಷ್ಟು?

ಆ) ಸರ್ಕಾರವು ಅಂದಾಜು ವೆಚ್ಚದ ಕನಿಷ್ಠ 1:3 ಹಣವನ್ನು ಬಿಡುಗಡೆ ಮಾಡದಿರುವುದರಿಂದಾ ಏತ ನೀರಾವರಿ ಯೋಜನೆಗಳ ಕಾರ್ಯ ಇದುವರೆವಿಗೂ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಕೂಡಲೇ ಸರ್ಕಾರವು ಹಣವನ್ನು ಬಿಡುಗಡೆ ಮಾಡಿ ಕೊಪ್ಪಳ ನಗರದಲ್ಲಿ ಕುಡಿಯುವ ನೀರಿನ ಬವಣೆಯನ್ನು ಹೋಗಲಾಡಿಸಲು ಸರ್ಕಾರದವರು ಕ್ರಮ

ಕೈಗೊಳ್ಳುವರೇ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-

ಅ) ಪ್ರತಿ ಕಾಮಗಾರಿಗೆ ಸಾಂಕೇತಿಕ ಅನುದಾನವಾಗಿ 1000 ರೂ.ಗಳನ್ನು 1996-97ನೇ ಸಾಲಿನ ಆಯವ್ಯದಲ್ಲಿ ಸರ್ವೆ ಕೆಲಸ, ವಿನ್ಯಾಸ ಮತ್ತು ಅಂದಾಜು ತಯಾರಿಸಲು ಒದಗಿಸಲಾಗಿದೆ.

ಆ) ಈ ಕಾಮಗಾರಿಗಳ ಆರ್ಥಿಕ ಮತ್ತು ತಾಂತ್ರಿಕ ಶಕ್ಯತೆಯನ್ನು ಇನ್ನೂ ಪರಿಶೀಲಸ ಬೇಕಾಗಿರುವುದರಿಂದ ಇವುಗಳಿಗೆ 1:3 ಭಾಗ ಅನುದಾನವನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಏತ ನೀರಾವರಿ ಯೋಜನೆಗಳನ್ನು ನೀರಾವರಿಗಾಗಿ ಯೋಜಿಸಿರುವುದರಿಂದ ಕುಡಿಯುವ ನೀರಿನ ಬವಣೆ ಹೋಗಲಾಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಸಿದ್ದಾಪುರ ಗ್ರಾಮದಲ್ಲಿ ಹಸಿರು ಮತ್ತು ಕೇಸರಿ ಕಾರ್ಡುಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 689 (1398)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಸಿದ್ದಾಪುರ ಗ್ರಾಮದಲ್ಲಿರುವ ಕುಟುಂಬಗಳ ಸಂಖ್ಯೆ ಎಷ್ಟು;

ಆ) ಅವರಲ್ಲಿ ಹಸಿರು ಮತ್ತು ಕೇಸರಿ ಕಾರ್ಡ್ ಹೊಂದಿದ ಕುಟುಂಬಗಳೆಷ್ಟು;

ಇ) ಕಾರ್ಡು ರಹಿತರ ಸಂಖ್ಯೆ ಎಷ್ಟು;

ಈ) ಅವರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆ ಎಷ್ಟು?

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) 1028.

ಆ) ಕೇಸರಿ ಕಾರ್ಡು - 711

ಹಸಿರು ಕಾರ್ಡು - 321

ಒಟ್ಟು 1012

ಇ) ಗ್ರಾಮ ಸಭೆಗಳಲ್ಲಿ ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಪಡಿತರ ಚೀಟಿಗಳನ್ನು ವಿತರಿಸಿದೆ.